ಸೆಲೆಬ್ರಿಟಿ

■ ಹನಿ

# ಅಂಬಾನಿಯ ಸಂಬಳ

ವರ್ಷದಿಂದ ವರ್ಷಕ್ಕೆ ಸಂಬಳ ಹೆಚ್ಚಾಗುವುದು ಸಹಜ. ಲಾಭದಾಯಕ ಕಂಪೆನಿಯಲ್ಲಂತೂ ಸಂಬಳ ಒಂದೇ ಸಮನೆ ಏರುತ್ತದೆ. ಅದರಲ್ಲೂ ಆತ ಕಂಪೆನಿಯ ಒಡೆಯನೇ ಆಗಿದ್ದರೆ ಸಿಕ್ಕಾಪಟ್ಟೆ ಏರಿಕೆ ಸಾಮಾನ್ಯ. ಆದರೆ ವಹಿವಾಟಿನಲ್ಲಿ ಭಾರತದ ಎರಡನೆ ಅತಿದೊಡ್ಡ ಕಂಪೆನಿಯಾಗಿರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮಾಲೀಕ ಮುಖೇಶ್ ಅಂಬಾನಿಯ ಸಂಬಳ ಕಳೆದ ನಾಲ್ಕು ವರ್ಷಗಳಿಂದ ಏರಿಯೇ ಇಲ್ಲ! ಈ ವರ್ಷವೂ ಆತನ ಸಂಬಳವನ್ನು ವಾರ್ಷಿಕ 15 ಕೋಟಿ ರೂಪಾಯಿಗೇ ನಿಲ್ಲಿಸಿ ಜನರಲ್ ಬಾಡಿ ನಿರ್ಧಾರ ಕೈಗೊಂಡಿದೆ. ವಾಸ್ತವವಾಗಿ ಕಂಪೆನಿಯ ನಿರ್ಧಾರದಂತೆ ಮುಖೇಶ್ ಅಂಬಾನಿ 38.82 ಕೋಟಿ ರೂಪಾಯಿ ಸಂಬಳ ಪಡೆಯಬಹುದು. 'ನನಗೆ 15 ಕೋಟಿಯೇ ಸಾಕು' ಎಂದು ಸ್ವತಃ ಮುಖೇಶ್ ನಿರ್ಧರಿಸಿದ್ದಾರಂತೆ. ಅದನ್ನು ಕಂಪೆನಿಯ ಜನರಲ್ ಬಾಡಿ ಅನುಮೋದಿಸಿದೆ.



ಯೆಮೆನ್ ಸಂಜಾತ ಭಾರತೀಯ ಮುಖೇಶ್ ಅಂಬಾನಿ (ಬರ್ತ್‌ಡೇ 19-4-1957) ಈಗ ಏಷ್ಯಾದಲ್ಲೇ ಎರಡನೇ ಅತಿದೊಡ್ಡ ಶ್ರೀಮಂತ. ಜಗತ್ತಿನ 19ನೇ ಅತಿದೊಡ್ಡ ಶ್ರೀಮಂತನಾಗಿರುವ ಈತನ ಒಟ್ಟು ಆಸ್ತಿ ಮೊತ್ತ 22.3 ಶತಕೋಟಿ ಅಮೆರಿಕನ್ ಡಾಲರ್. ಮುಂಬೈ ಇಂಡಿಯನ್ಸ್ ಕ್ರಿಕೆಟ್ ಕ್ಲಬ್‌ನ ಮಾಲೀಕನಾಗಿರುವ ಮುಖೇಶ್, ವಿಶ್ವದಲ್ಲೇ ಎರಡನೆಯ ಅತಿ ಶ್ರೀಮಂತ ಕ್ರೀಡಾತಂಡದ ಮಾಲೀಕನೂ ಹೌದು. ವಿಶ್ವದ ಅತಿದೊಡ್ಡ ತೈಲ ಸಂಸ್ಕರಣಾ ಸಂಕೀರ್ಣ ಹೊಂದಿರುವ ಈತನ ಕಂಪೆನಿ, 'ಫಾರ್ಚೂನ್ ಗ್ಲೋಬ್ 500' ಉದ್ಯಮಗಳ ಪಟ್ಟಿಯಲ್ಲಿ 134ನೇ ಸ್ಥಾನದಲ್ಲಿದೆ. 'ಇಷ್ಟೆಲ್ಲ ಇರುವಾಗ ಸಂಬಳ ಯಾತಕ್ಕೆ?' ಎಂದು ಕೇಳಬಹುದು. ಆದರೆ 2008-09ರಲ್ಲಿ ಕಂಪೆನಿಗಳ ಉನ್ನತ ಮ್ಯಾನೇಜ್‌ಮೆಂಟ್‌ನ ಸಂಬಳ ಏರಿಕೆಯನ್ನು ತಡೆಯುವಂತೆ ಸಾರ್ವತ್ರಿಕ ಸಲಹೆ ಬಂದ ಹಿನ್ನೆಲೆಯಲ್ಲಿ ಅದನ್ನು ಅನುಷ್ಠಾನಕ್ಕೆ ತರಲು ನಿರ್ಧರಿಸಿದ ಮುಖೇಶ್ ಈಗಲೂ ಅದೇ ನಿರ್ಧಾರಕ್ಕೆ ಅಂಟಿಕೊಂಡಿದ್ದಾರೆ. 2007-08ರಲ್ಲಿ ಇವರ ಸಂಬಳ ವಾರ್ಷಿಕ 44 ಕೋಟಿ ರೂಪಾಯಿ ಇತ್ತು. ವರ್ಷಕ್ಕೆ 15 ಕೋಟಿ ಸಂಬಳದಲ್ಲಿ ಮುಖೇಶ್ ಅವರಿಗೆ ಸಂಬಳ ಎಂದು ಇರುವುದು 4.16 ಕೋಟಿ ಮಾತ್ರ. 60 ಲಕ್ಷ ರೂಪಾಯಿ ಭತ್ಯೆ, 78 ಲಕ್ಷ ರೂಪಾಯಿ ನಿವೃತ್ತಿ ಸೌಲಭ್ಯ ಹಾಗೂ 9.46 ಕೋಟಿ ರೂಪಾಯಿ ಕಮಿಶನ್- ಎಲ್ಲ ಸೇರಿ 15 ಕೋಟಿಯಂತೆ!

## ಗೆಳತಿಯರ ಕಾಟ

'ಹಳೆ ಗೆಳತಿ ಕೆಮ್ಮಿದರೆ ಪ್ರಳಯಾನೆ ಗ್ಯಾರಂಟಿ...' ಎನ್ನುವ ಕನ್ನಡ ಸಿನಿಮಾ ಹಾಡು ವಿಶ್ವ ಚಾಂಪಿಯನ್ ಓಟಗಾರ ಉಸ್ಸೇನ್ ಬೋಲ್ಟ್‌ಗೆ ಈಗ ಕರೆಕ್ಟಾಗಿ ಒಪ್ಪುತ್ತಿದೆ. 100 ಮೀಟರ್, 200 ಮೀಟರ್ ಮತ್ತು (ಸಹ ಓಟಗಾರರ ಜತೆ) 4-100 ಮೀಟರ್ ರಿಲೇ ಓಟದಲ್ಲಿ ವಿಶ್ವ ಚಾಂಪಿಯನ್ ಹಾಗೂ ಒಲಿಂಪಿಕ್ ಚಾಂಪಿಯನ್ ಆಗಿರುವ 'ಕರಿ ಚಿರತೆ' ಬೋಲ್ಟ್, ಬಿಳಿ ತೊಗಲಿನ ಸ್ಲೊವೇಕಿಯನ್ ಸುಂದರಿ ಲುಬಿಕಾಳ ಪ್ರೇಮಪಾಶದಿಂದ ಬಿಡಿಸಿಕೊಂಡು ಈಗ ಮತ್ತೆ ಹಳೇ ಗೆಳತಿ, ಕರಿಯಳೇ ಆದ ಮಿಕ್ಸಿಕನ್ ಇವಾನ್ಸ್ ಕಡೆಗೆ ಮರಳಿದ್ದಾನಂತೆ. ಶ್ವೇತಸುಂದರಿ ಲುಬಿಕಾ ಮತ್ತು ಉಸ್ಸೇನ್ ಬೋಲ್ಟ್ ಕಳೆದ ಆರು ತಿಂಗಳಿಂದ ಡೇಟಿಂಗ್ ನಡೆಸುತ್ತಿದ್ದರು. ಶೀಘ್ರವೇ ಆಕೆಯನ್ನು ಬೋಲ್ಟ್ ಮದುವೆ ಆಗುವುದಾಗಿಯೂ ಸುದ್ದಿ ಹಬ್ಬಿತ್ತು. ಕಳೆದ ವಾರ ಪತ್ರಿಕೆಯೊಂದರಲ್ಲಿ ಶ್ವೇತಸುಂದರಿ ಗೆಳತಿಗೆ ಬೋಲ್ಟ್ ಮುತ್ತು ಕೊಟ್ಟ ದೃಶ್ಯ ಮತ್ತು ಮದುವೆಯ ಸುದ್ದಿ ಪ್ರಕಟವಾದದ್ದೇ ತಡ, ಕರಿಯರು ಬೋಲ್ಟ್ ವಿರುದ್ಧ ಸಿಡಿದೆದ್ದಿದ್ದಾರೆ. ಬ್ಲಾಗ್‌ಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಬೋಲ್ಟ್‌ನ 'ಬಿಳಿ ಚರ್ಮದ ಮೋಹ'ವನ್ನು ಕಟುವಾಗಿ ಖಂಡಿಸಿದ್ದಾರೆ. 'ಇದು ಕರಿಯರ ಆತ್ಮಗೌರವದ ಪ್ರಶ್ನೆ' ಎಂದೆಲ್ಲ ಕೂಗಾಡಿದ್ದಾರೆ. ಈ ಪ್ರತಿಭಟನೆಯಿಂದ ದಿಗಿಲೆದ್ದ ಬೋಲ್ಟ್, ಇದೀಗ ಮತ್ತೆ ಹಳೆಯ ಗೆಳತಿ ಮಿಕ್ಸಿಕನ್ ಇವಾನ್ಸ್ ಜತೆಗೆ ಓಡಾಡಲು ತೊಡಗಿದ್ದಾನೆ.



ಲಂಡನ್ ಒಲಿಂಪಿಕ್ಸ್ ಮೇಲೆ ಕಣ್ಣು ನೆಟ್ಟು ಕುಳಿತಿರುವಾತ ಉಸ್ಸೇನ್ ಬೋಲ್ಟ್. ಈಗಾಗಲೆ ಐದು ಸಲ ವಿಶ್ವ ಚಾಂಪಿಯನ್ ಆಗಿರುವ, ಮೂರು ಸಲ ಒಲಿಂಪಿಕ್ಸ್ ಚಿನ್ನ ಗೆದ್ದಿರುವ ಬೋಲ್ಟ್ ಈ ಸಲ ಲಂಡನ್ ಒಲಿಂಪಿಕ್ಸ್‌ನಲ್ಲೂ ಚಿನ್ನ ಗೆಲ್ಲುವ ಬಗ್ಗೆ ಯಾವುದೇ ಅನುಮಾನಗಳು ಉಳಿದಿಲ್ಲ. ಕಳೆದ ವಾರ ನಡೆದ ಜಮೈಕಾ ಆಹ್ವಾನ ಓಟದಲ್ಲಿ ಆತ 9.82 ಸೆಕೆಂಡ್‌ಗಳಲ್ಲಿ 100 ಮೀಟರ್ ಓಟ ಮುಗಿಸಿ ಚಿನ್ನ ಗೆದ್ದಿದ್ದಾನೆ. ಟ್ರ್ಯಾಕ್‌ನಲ್ಲಿ ಅರ್ಧದ ಬಳಿಕ ಬೋಲ್ಟ್ ಒಮ್ಮೆಲೆ ವೇಗ ಹೆಚ್ಚಿಸಿಕೊಂಡ ಪರಿ ಬೆರಗು ಹುಟ್ಟಿಸುವಂತಿತ್ತು. ಈ ವರ್ಷ ಬೇರ‍್ಯಾವ ಓಟಗಾರರೂ ಇಷ್ಟೊಂದು ಸ್ಪೀಡಾಗಿ ಓಡಿಲ್ಲ.

26ರ ಹರೆಯದ ಬೋಲ್ಟ್‌ಗೆ (ಬರ್ತ್‌ಡೇ 21-8-1986) ಮದುವೆಗೆ ತುರ್ತೇನೂ ಇಲ್ಲವಂತೆ. ಲಂಡನ್ ಒಲಿಂಪಿಕ್ಸ್ ಬಳಿಕವೂ ಆತನ ಯೋಜನೆಗಳು ಬಹಳಷ್ಟಿವೆಯಂತೆ. ವೇಗದ ಓಟಗಾರನಾದರೂ ಆತನ ಅತ್ಯಂತ ಇಷ್ಟದ ಕ್ರೀಡೆ ಕ್ರಿಕೆಟ್ ಮತ್ತು ಫುಟ್‌ಬಾಲ್. 'ಓಟಗಾರನಾಗದಿದ್ದಲ್ಲಿ ನಾನು ಕ್ರಿಕೆಟ್‌ನಲ್ಲಿ ವೇಗದ ಬೌಲರ್ ಆಗಿರುತ್ತಿದ್ದೆ' ಎಂದಿದ್ದಾನೆ. ಸಚಿನ್ ಮತ್ತು ಕ್ರಿಸ್ ಗೇಲ್ ಆತನ ನೆಚ್ಚಿನ ಆಟಗಾರರಂತೆ. ಆತನ ಹಳೆಯ ಗೆಳತಿ ಬೋಲ್ಟ್ ಕುಟುಂಬ ದೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದು, ಈತನನ್ನೇ ವರಿಸುವ ಮಾತನ್ನಾಡಿದ್ದಾಳೆ. ಸದ್ಯಕ್ಕಂತೂ ಲುಬಿಕಾಗೆ ಟಾಟಾ ಹೇಳಿ ಬೋಲ್ಟ್ ಲಂಡನ್ ಒಲಿಂಪಿಕ್ಸ್ ಸಿದ್ಧತೆಗೆ ತೊಡಗಿದ್ದಾನೆ. ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65